ಶಿವರಾಜ್ ಕೆ. ವಿಭೂತಿ, ಹರಿಹರ

*ಇಲ್ಲೊಬ್ಬ ಟೀಷರ್ಟ್ ಮೇಲೆ ಆದಿಮಾನವ ಅಂತ ಬರೆಸಿದ್ದಾನಲ್ಲಾ, ಏನಿದರ ರಹಸ್ಯ?*




ಕೋತಿ ತರಹ ಇರೋವ್ನು ಮನುಷ್ಯ ಅಂತ ಹೇಳ್ಕೊಳ್ಳಕ್ಕೆ ಮಾಡ್ತಿರೋ ಪ್ರಯತ್ನ!

ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

*ರಾವಣನ ವಿಳಾಸ ಸಿಕ್ಕಿದೆಯಾ ರಾಮ್?*

ಕೇಳಿದ್ದೇನೆ; ಇನ್ನೂ ಯಾವ ಕೋತಿನೂ ತಂದುಕೊಟ್ಟಿಲ್ಲ!

ಗೀತಾ ಬರ್ಲ, ಬೆಂಗಳೂರು

*ಲಕ್ಷ್ಮಿ ಮತ್ತು ಸರಸ್ವತಿ ಒಂದೇ ಕಡೆ ಇರುವುದಿಲ್ಲ ಎನ್ನುತ್ತಾರಲ್ಲಾ, ಏಕೆ?*

ಅತ್ತೆ- ಸೊಸೆ ಆದ ಏಕೈಕ ಕಾರಣ!

ಎಚ್. ಆನಂದ್ ಕುಮಾರ್, ಚಿತ್ರದುರ್ಗ

*ಹುಡುಗಿಯರ- ರಾಜಕಾರಣಿಗಳ ಬಗ್ಗೆ ಪ್ರಶ್ನಾವಳಿಗಳು ಹೆಚ್ಚು; ಕಾರಣ ಏನು?*

ಚಂಚಲತೆ ಇರುವಲ್ಲಿ ಸಂದೇಹ ಹೆಚ್ಚು!

ಕುಮಾರ ಚಲವಾದಿ, ಹಾಸನ

*ನನ್ನ ಕನಸಿನಲ್ಲಿ ಬರೀ ದೆವ್ವ, ಪ್ರೇತ, ಪಿಶಾಚಿಗಳೇ ಬರುತ್ತವೆ; ಒಮ್ಮೆಯಾದರೂ ದೇವರು ಕಾಣಲು ಏನು ಮಾಡಲಿ?*




ಮಲಗುವ ಮುನ್ನ ಅದ್ಯಾಕ್ರೀ ಪ್ರತಿದಿನ ಕ್ರೈಂ ನ್ಯೂಸ್ ನೋಡ್ತೀರಿ!

ಎಸ್.ಜಿ. ಕರನಂದಿ, ಹುನಗುಂದ

*ಇಹಲೋಕಕ್ಕೆ ಬರುವ ಮತ್ತು ಹೋಗುವ ದಿನಾಂಕ ನಿಗದಿಯಾಗಿದ್ದರೆ ಏನಾಗಬಹುದಿತ್ತು?*

ಲೈಫ್ ಇನ್ಸುರೆನ್ಸ್ ಕಂಪೆನಿಗಳು ಹುಟ್ಟುತ್ತಲೇ ಇರಲಿಲ್ಲವಾದ್ದರಿಂದ ಇನ್ಸುರೆನ್ಸ್ ಏಜೆಂಟನ ಕಾಟ ತಪ್ಪುತ್ತಿತ್ತು!

ರಾಮಚಂದ್ರ ಮಾಧವ ಪೈ, ಹೊನ್ನಾವರ

*ಕರ್ಮ ಮೇಲೋ, ಧರ್ಮ ಮೇಲೋ...?*

ಹಣೆಯಲ್ಲಿ ಹಚ್ಚಿಕೊಳ್ಳುವ ಸ್ಥಳಕ್ಕಿಂತ, ಚಚ್ಚಿಕೊಳ್ಳುವ ಸ್ಥಳ ಮೇಲಾದ್ದರಿಂದ ಕರ್ಮವೇ ಮೇಲು!

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಪಿಂಪಲ್ ಮತ್ತು ಡಿಂಪಲ್ ಇವುಗಳಲ್ಲಿನ ವ್ಯತ್ಯಾಸವೇನು?*

ಪಿಂಪಲ್ ಕಂಡ್ರೆ ಹುಡುಗಿಯರು ಬೆಚ್ಚಿ ಬೀಳ್ತಾರೆ, ಡಿಂಪಲ್ ಕಂಡ್ರೆ ಹುಡುಗರು ಮೆಚ್ಚಿ ಬೀಳ್ತಾರೆ!

ಆರಿಫ್, ದಾವಣಗೆರೆ

*ಮದುವೆಮನೆಗಳಲ್ಲಿ ವಧುವಿಗಿಂತಾ ಮದುವೆಗೆ ಬಂದ ಹುಡುಗಿಯರೇ ಹೆಚ್ಚು ಅಲಂಕಾರ ಮಾಡಿಕೊಂಡು ಬರುತ್ತಾರಲ್ಲಾ?*

ಸರಿಯೇ; ಹಸೆಮಣೆಯೆಂಬ ಹಳ್ಳಕ್ಕೆ ಮದುಮಗನೆಂಬ ಮದಗಜವನ್ನು ಸೆಳೆಯಲು ಈ ಅಲಂಕಾರವೇ ಆಪರೇಷನ್ ಖೆಡ್ಡಾ!

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು

*ಜನ ತಾವು ಕೆಟ್ಟುಹೋಗಿ ಕಾಲ ಕೆಟ್ಹೋಯ್ತು ಅಂತಾರಲ್ಲ, ಇದು ಸರೀನಾ...?*

ಇಸ್ಪೀಟ್, ರೇಸ್‌ನಲ್ಲಿ ಹಣ ಕಳೆದು ಮನೆ ವಾಸ್ತು ಸರಿಯಿಲ್ಲ ಎನ್ನುವವರಿಲ್ಲವೇ...! ಕಳ್ಳನಿಗೊಂದು ಪಿಳ್ಳೆ ನೆವ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಕಣ್ಣುಗಳು ಚಿಕ್ಕದಾದರೂ ಕನಸುಗಳು ದೊಡ್ಡದಾಗಿ ಕಾಣುತ್ತವಲ್ಲಾ, ಯಾಕೆ?*

ಆಸೆಯೆಂಬ ಬೂದುಗಾಜಿನ ಮೂಲಕ ನೋಡುವುದರಿಂದ!

ಹಾಡ್ಯ ಬಿ. ಜಯಾನಂದ, ಮೈಸೂರು

*ವೇಷ, ಭಾಷೆ ಬೇರೆ ಬೇರೆ ಇದ್ದರೂ ಚಾಲಾಕಿತನದಲ್ಲಿ ಒಂದೇ; ಯಾರಿವರು?*

ವಾಸ್ತು-ಸಂಖ್ಯಾ-ಪಾಣಿ-ಫಲ-ಗಿಳಿ ಜೋತಿಷಿಗಳು!

ಶ್ರೀಮತಿ ಶರ್ವಾಣಿ, ಮೈಸೂರು

*ಸಂಭವಾಮಿ ಯುಗೇ ಯುಗೇ ಎಂದ ಭಗವಂತ ಮಾತಿಗೆ ತಪ್ಪಿದನಲ್ಲಾ?*

ಬಂದಿದ್ದನಂತೆ, ಬುರುಡೆ ಬ್ರಹ್ಮಾಂಡ ಜೋತಿಷಿಗಳ ಅಬ್ಬರಕ್ಕೆ ಹೆದರಿ ಹೊರಟುಹೋದನಂತೆ!

## ಬಹುಮಾನಿತ ಪ್ರಶ್ನೆ

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಎಲ್ಲಾ ಗಂಡಸರೂ ಎಡಗೈಗೇ ವಾಚ್ ಕಟ್ತಾರಲ್ಲಾ, ಯಾಕೆ ಗುರುಗಳೆ?*

ಅವರ ಹೆಚ್ಚಿನ ಸಮಯ ಎಡ-ವಟ್ಟೇ ಆದ್ದರಿಂದ!

ಬಿ. ಚಂದ್ರೇಗೌಡ, ಬೆಂಗಳೂರು

*ಕೆಟ್ಟ ಹೆಂಡತಿ ಸಿಕ್ಕವನು ತತ್ವಜ್ಞಾನಿಯಾಗುವನಂತೆ, ಯಾಕೆ?*

ಥತ್, ಅಜ್ಞಾನಿ ಎಂದು ಅವಳು ಬೈದೂ ಬೈದೂ ಈ ದಿಕ್ಕಿಗೆ ತಳ್ಳುವಳಂತೆ!

ಪೇಂಟರ್ ಪಾಪು, ಸಂತೇಮರಹಳ್ಳಿ

*ಎಲ್ಲಾ ಹವ್ಯಾಸಗಳಿಗಿಂತ ಶ್ರೇಷ್ಠವಾದ ಹವ್ಯಾಸ ಯಾವುದು?*

ಈ ಅಂಕಣಕ್ಕೆ ಪ್ರಶ್ನೆ ಕಳುಹಿಸುವುದು!

ವಿ. ಹಮೀದ್, ವಿಟ್ಲ

*ಓಟಗಾರ್ತಿಯನ್ನು ವರಿಸಬೇಕೆಂದಿದ್ದೇನೆ, ನೀವೇನೆನ್ನುವಿರಿ?*




ಗುಡ್! ಅವಳು ಬೇಡವೆನಿಸಿದಾಗ ಆನ್ ಯುವರ್ ಮಾರ್ಕ್... ಗೆಟ್ ಸೆಟ್... ಗೋ... ಎನ್ನಿ, ಓಡಿಹೋಗಿ ಬಿಡುತ್ತಾಳೆ!

ಲ್ಯಾಂಡ್‌ಬ್ಯಾಂಕ್ ಡಿ. ಚಂದ್ರಕುಮಾರ್ ಬೆಂಗಳೂರು

*ಆಸೆಗೆ ಟ್ಯಾಕ್ಸ್ ಕಟ್ಟುವಂತಿದ್ದರೆ?*

ಎಲ್ಲಾ ಆಸೆಗಳನ್ನೂ ಮುಚ್ಚಿಟ್ಟುಕೊಂಡಿರುತ್ತಿದ್ದರು!

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್

*ಭೂಹಗರಣ ಮಾಡುವವನನ್ನು ಭೂಪಾಲಕ ಎನ್ನಬಹುದೆ?*

ಭೂ-ಭೂಮಿಯನ್ನು, ಪಾ - ಪಾಲಾಗಿಸಿಕೊಳ್ಳುವ, ಲ - ಲಜ್ಜೆಗೆಟ್ಟ, ಕ- ಕಳ್ಳ ಎಂದರೆ ಆಗಬಹುದು!

ಬಾ.ರಂ. ಸುರೇಶ್, ಶಿವಮೊಗ್ಗ

*1200 ಕೋಟಿ ಜನಸಂಖ್ಯೆ ಇರುವ ನಮ್ಮ ದೇಶಕ್ಕೆ ಒಲಿಂಪಿಕ್ಸ್‌ನಲ್ಲಿ ಕಡೇಪಕ್ಷ 100 ಪದಕಗಳೂ ಸಿಗಲಿಲ್ಲವಲ್ಲಾ...?*

ಪದಕ ನೀಡಲು ಸಂಖ್ಯೆ ಆಧಾರದ ಮೇಲೆ ಮೀಸಲಾತಿ ಇರಲಿಲ್ಲವಂತೆ!

■ ರಾಮ್